## ಫಿಷರ್ಸ್ (Fissures)

ಅಂತಿಮವಾಗಿ ಕಂಡುಬರುವ ಗುದದ್ವಾರದ ಕಾಯಿಲೆ ಫಿಷರ್ಸ್. ಗುದದ್ವಾರದ ಚರ್ಮದಲ್ಲಿ ಕಂಡುಬರುವ ಊರ್ಧ್ವವಾದ ಸೀಳುಯುಕ್ತ ಗೆರೆ ಆಕಾರದ ರಚನೆಯಾಗಿವೆ. ಇದು ಅಧಿಕ ಉರಿಯಿಂದ ಕೂಡಿದ್ದು ಕೆಲವೊಮ್ಮೆ ರಕ್ತಸ್ರಾವವು ಆಗುತ್ತದೆ. ಇದರಲ್ಲಿ ಪ್ರಮುಖವಾಗಿ ಕಂಡುಬರುವ ಲಕ್ಷಣಗಳೆಂದರೆ ಮಲವಿಸರ್ಜನೆಯ ಮೊದಲು ಹಾಗೂ ನಂತರ ಉರಿ, ನೋವು ಮತ್ತು ಗುದದ್ವಾರದಲ್ಲಿ ಕೆರೆತ, ಮಲವಿಸರ್ಜನೆಯ ಸಮಯದಲ್ಲಿ ರಕ್ತಸ್ರಾವ, ಮಲದಲ್ಲಿ ವಾಸನೆ, ನೋವಿನಿಂದ ಕೂಡಿದ ಉರಿ ಮತ್ತು ಕೆರೆತ.

ಫಿಷರ್ಸ್‌ನಲ್ಲಿ ಪ್ರಮುಖವಾಗಿ ಎರಡು ವಿಧಗಳಿದ್ದು ಮಲವಿಸರ್ಜನೆಯ ನಂತರ ಮಲದ್ವಾರವನ್ನು ತಣ್ಣೀರಿನಿಂದ ತೊಳೆದರೆ ಶಮನವಾಗುವಿಕೆ ಹಾಗೂ ಎರಡನೆಯದಾಗಿ ಬಿಸಿನೀರಿನಿಂದ ತೊಳೆದಾಗ ಶಮನವಾಗುವಿಕೆ.

ಫಿಷರ್ಸ್ ಉಂಟಾಗಲು ಕಾರಣ ನೀರನ್ನು ಕಡಿಮೆ ಪ್ರಮಾಣದಲ್ಲಿ ಸೇವನೆ, ದೀರ್ಘಕಾಲದ ಮಲಬದ್ಧತೆ ಇರುವುದು, ಮಲದ್ವಾರದ ಶುಚಿತ್ವ ಕಾಪಾಡದೆ ಇರುವುದು.




ಹೆಚ್ಚಾಗಿ ಕಾಣಸಿಗುತ್ತಿದ್ದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆಲ್ಲ ಮರುಕಳಿಸುತ್ತಿದೆ.

### ಮೂಲವ್ಯಾಧಿ ಹಂತಗಳು ನಾಲ್ಕು

ಮೂಲವ್ಯಾಧಿ ಹಂತ ಹಂತವಾಗಿ ವಿಂಗಡಿಸಲ್ಪಟ್ಟಿದ್ದು ಪ್ರಮುಖವಾಗಿ ಮಲದ್ವಾರದಲ್ಲಿ ಊತವಿಲ್ಲದೇ ರಕ್ತಸ್ರಾವ, ಎರಡನೆಯದಾಗಿ ಮಲದ್ವಾರದಲ್ಲಿ ಊತವಿದ್ದು ಹಾಗೂ ಅದು ಮಲವಿಸರ್ಜನೆ ನಂತರ ಒಳ ಹೋಗುವುದು. ಮೂರನೆಯದಾಗಿ ಮಲದ್ವಾರವು ಊತಯುಕ್ತವಾಗಿ ಹೊರಬರುವಿಕೆ ಹಾಗೂ ಮಲವಿಸರ್ಜನೆಯ ನಂತರ ಅದನ್ನು ಬಲವಂತವಾಗಿ ಸ್ವಯಂ ಒಳತಳ್ಳಡುವಿಕೆ. ನಾಲ್ಕನೆಯದಾಗಿ ಮಲದ್ವಾರವು ಊತದಿಂದ ಹೊರಬಂದು ಅದರ ಚರ್ಮವು ಶಾಶ್ವತವಾಗಿ ಉಳಿಯುವಂಥದ್ದು. ಇದನ್ನು ಮೊಳೆಮಾಂಸ ಅಥವಾ ಪೈಲ್ಸ್ ಮಾಸ್ ಎಂದು ಕರೆಯುತ್ತಾರೆ.

### ತಡೆಯುವುದು ಹೇಗೆ?



ಮೂಲವ್ಯಾಧಿ ಬರದಂತೆ ಪಥ್ಯವನ್ನು ಮಾಡಬೇಕು. ನಾರಿನಂಶಯುಕ್ತ ಆಹಾರದ ಯಥೇಚ್ಛ ಸೇವನೆ, ನೀರಿನ ಸೇವನೆ, ವ್ಯಾಯಾಮ, ಸರಿಯಾದ ನಿದ್ರೆ, ದೇಹಕ್ಕೆ ಅತೀ ಉಷ್ಣತೆಯನ್ನುಂಟು ಮಾಡುವ ಆಹಾರ ಪದಾರ್ಥಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸುವುದು, ಮಾಂಸಾಹಾರ ವರ್ಜ್ಯ, ಮಲವನ್ನು ಹೆಚ್ಚಿನ ಸಮಯದವರೆಗೆ ತಡೆಹಿಡಿಯದೇ ಇರುವುದು. ಇವೆಲ್ಲದರಿಂದ ಮೂಲವ್ಯಾಧಿಯನ್ನು ನಿಯಂತ್ರಣದಲ್ಲಿಡಬಹುದು ಹಾಗೂ ಬರದಂತೆಯೂ ತಡೆಯಬಹುದು.

### ಆಯುರ್ವೇದ ಪರಿಹಾರ

ಮೂಲವ್ಯಾಧಿಗೆ ಆಯುರ್ವೇದದಲ್ಲಿ ಉತ್ತಮ ಔಷಧಿ ಲಭ್ಯವಿದೆ. ಕೇವಲ 5–6 ತಿಂಗಳ ನಿಯಮಿತವಾದ ಔಷಧಿಯಿಂದ ಉಪಚರಿಸಬಹುದಾಗಿದ್ದು ಇದರಿಂದ ಒಳ್ಳೆಯ ಲಾಭವನ್ನು ಪಡೆಯಬಹುದು. ಕೇವಲ ಎರಡು ರೀತಿಯ ಅರ್ಶಹರ ಮಾತ್ರೆ, ಲೇಹ್ಯ ಹಾಗೂ ಒಂದು ಬಗೆಯ ತೈಲದ ಉಪಯೋಗದಿಂದ ವಾಸಿ ಮಾಡಬಹುದು.

### ಫಿಸ್ತುಲಾ; ಪಥ್ಯ ಮಾಡಿ

ಗುದದ್ವಾರದಲ್ಲಿ ಉಂಟಾಗುವ ಎರಡನೆಯ ಬಗೆಯ ಕಾಯಿಲೆಯೇ ಫಿಸ್ತುಲಾ. ಇದು ಪ್ರಮುಖವಾಗಿ ಮಲದ್ವಾರ ಹಾಗೂ ಅದರ ಪಕ್ಕದಲ್ಲಿ ರಂಧ್ರ ಉಂಟಾಗಿ ಇವೆರೆಡು ಜೋಡಿಸಲ್ಪಟ್ಟು ಇದರಲ್ಲಿ ರಕ್ತ ಮತ್ತು ಕೀವು ತುಂಬಿಕೊಂಡು ಅಸಾಧ್ಯ ಪ್ರಮಾಣದ ನೋವಿರುತ್ತದೆ. ಇದಕ್ಕೆ ಫಿಸ್ತುಲಾ (ನಾಡಿವ್ರಣ) ಅಥವಾ ಭಗಂಧರ ಎನ್ನುತ್ತಾರೆ.

ನಮ್ಮ ಜೀರ್ಣಕ್ರಿಯೆಯ ಅಂತಿಮ ಭಾಗದ ಕರುಳಿನಲ್ಲಿ ಮಲವಿಸರ್ಜನೆಗೆಂದು ಲೋಳೆಯುಕ್ತವಾದ ಪದಾರ್ಥವಿದ್ದು ಇದರಿಂದ ಮಲವಿಸರ್ಜನೆ ಸರಾಗವಾಗುತ್ತದೆ. ಕಾರಣಾಂತರದಿಂದ ಈ ಜೀರ್ಣಾಂಗದ ಲೋಳೆಯುಕ್ತ ಪದಾರ್ಥದಲ್ಲಿ ಯಾವುದೋ ತರಹದ ಸೋಂಕಿನಿಂದ ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಗ್ರಂಥಿ ಉಂಟಾಗುವುದು. ಈ ಗ್ರಂಥಿಗಳಲ್ಲಿ ಸೋಂಕಿನಿಂದ ರಕ್ತ ಮತ್ತು ಕೀವು ತುಂಬಿಕೊಳ್ಳುವುದು. ಕ್ರಮೇಣವಾಗಿ ಲೋಳೆಯನ್ನು ಉತ್ಪಾದಿಸುವ ಅಂಶವು ಕಡಿಮೆಯಾಗಿ ಭಗಂಧರ ಉಂಟಾಗುತ್ತದೆ.

ಫಿಸ್ತುಲಾವು ತೀವ್ರತರದ ವ್ಯಾಧಿಯಾಗಿದ್ದು, ಇದರಲ್ಲಿ ಅತಿಯಾದ ನೋವು, ಜ್ವರ ಕಂಡುಬರುತ್ತದೆ. ಯಾವುದೇ ಆಸನದಲ್ಲಿ ಕುಳಿತುಕೊಳ್ಳಲು ಆಗದೇ ಇರುವಂಥದು. ಮಲದ್ವಾರದ ಸೋಂಕು, ಹೆಚ್ಚು ಸಮಯ ಒಂದೇ ಸ್ಥಳದಲ್ಲಿ ಕುಳಿತುಕೊಳ್ಳುವುದು, ಅತಿಯಾದ ವಾಹನ ಚಾಲನೆ ಮಾಡುವವರಲ್ಲಿ ಇದು ಕಂಡುಬರುತ್ತದೆ. ಇದಕ್ಕೆಂದು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡರೆ 2–3 ತಿಂಗಳಲ್ಲಿ ಪುನಃ ಮರುಕಳಿಸುವ ಸಾಧ್ಯತೆಯೂ ಇದೆ.

ಆಯುರ್ವೇದದಲ್ಲಿ ಉತ್ತಮ ಮಾತ್ರೆಗಳು ಲಭ್ಯವಿದ್ದು ಇವನ್ನು 4–5 ತಿಂಗಳು ನಿಯಮಿತವಾದ ಪಥ್ಯ ಆಹಾರದೊಂದಿಗೆ ಸೇವಿಸಿದರೆ ಸಂಪೂರ್ಣ ಗುಣಮುಖರಾಗಬಹುದು.

(ಲೇಖಕರ ಸಂಪರ್ಕ: 94488 55313)